(೧೭) ಪುತ್ತೂರಿನ ಬಸ್ ನಿಲ್ದಾಣಕ್ಕೆ ಡಾಂಬರು/ಕಾಂಕ್ರೀಟ್ ಹಾಕುವ ಬಗ್ಗೆ

ಶ್ರೀ ವಿನಯಕುಮಾರ ಸೊರಕೆ(ಪುತ್ತೂರು).—ಮಾನ್ಯ ಅಧ್ಯಕ್ಷರೇ, ಪುತ್ತೂರು ಸರಕಾರಿ ಬಸ್ಸು ನಿಲ್ದಾಣದ ಕೆಲಸ ಕಾರ್ಯವು ಕಳೆದ ೧೫ ವರ್ಷದ ಹಿಂದೆ ಪೂರ್ತಿಯಾಗಿದ್ದು, ಇದರ ಉದ್ಘಾಟನೆ ಮಾನ್ಯ ಮಂತ್ರಿಗಳ ಮುಖಾಂತರ ನಡೆದಿರುತ್ತದೆ. ಅನಂತರ ಈ ಸ್ಥಳದಲ್ಲಿ ಬಸ್ಸು ನಿಲ್ದಾಣ ವ್ಯವಸ್ಥೆಯಾಗಿದ್ದು, ಆ ಸಂದರ್ಭದಲ್ಲಿ ಬಸ್ ನಿಲ್ದಾಣದ ಆವರಣಕ್ಕೆ ಡಾಂಬರು ಅಥವಾ ಕಾಂಕ್ರೀಟ್ ಹಾಕುವುದು, ಶೌಚಗೃಹ ನಿರ್ಮಾಣ ಮಾಡಿಲ್ಲಿದಿತ್ತು. ಈ ಬಸ್‌ನಿಲ್ದಾಣಕ್ಕೆ ಧರ್ಮಸ್ಥಳ, ಸುಬ್ರಮಣ್ಯ, ಉಡುಪಿ ಮುಂತಾದ ಸ್ಥಳಗಳಿಗೆ ಹೋಗುವ ಅಸಂಖ್ಯಾತ ಪ್ರಯಾಣಿಕರು ಪ್ರತಿದಿನ ಬರುತ್ತಾರೆ ಶೌಚಗೃಹವಿಲ್ಲದೆ ಅವರಿಗೆಲ್ಲ ಬಹಳ ತೊಂದರೆಯಾಗಿದೆ. ಬಸ್ ನಿಲ್ದಾಣಕ್ಕೆ ಡಾಂಬರು ಅಥವಾ ಕಾಂಕ್ರೀಟ್ ಹಾಕದೆಧೂಳು ಎದ್ದು ಬಸ್ ನಿಲ್ದಾಣದ ಕ್ಯಾಂಟೀನ್ ಒಳಗೆ ಹಾಗೂ ಪ್ರಯಾಣಿಕರ ಮೇಲೆ ಧೂಳು ತುಂಬುವುದರಿಂದ ಪ್ರಯಾಣಿಕರಿಗೆ ವಿಪರೀತ ತೊಂದರೆಯಾಗುತ್ತದೆ. ಈ ಬಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಒತ್ತಾಯಿಸಿ ತಂದರೂ ಯಾವುದೇ ಕ್ರಮವನ್ನೂ ಕೈಗೊಳ್ಳದಿರುವುದು ತೀರಾ ವಿಷಾದನೀಯ. ಆದುದರಿಂದ ಮಳೆಗಾಲ ಪ್ರಾರಂಭ ಆಗುವುದಕ್ಕಿಂತ ಮೊದಲು ಈ ಕೆಲಸಗಳನ್ನು ಪೂರ್ತಿಗೊಳಿಸುವ ರೀತಿಯಲ್ಲಿ ಕೆಲಸವನ್ನು ಕೈಗೊಳ್ಳುವಂತೆ ಸರಕಾರ ತೀವ್ರ ಕ್ರಮ ಕೈಗೊಳ್ಳಬೇಕಾಗಿ ಸರಕಾರವನ್ನು ತಮ್ಮ ಮುಖಾಂತರ ಒತ್ತಾಯಿಸುತ್ತೇನೆ.

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಾಣಿಜ್ಯಾನೆಗಳ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ನಿಯಮ ೩೩೪ ರ ಸೂಚನೆಗೆ ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ.

ಪುತ್ತೂರಿನಲ್ಲಿ ಬಸ್‌ನಿಲ್ದಾಣ ನಿರ್ಮಾಣಕ್ಕಾಗಿ ೭.೫೦ ಲಕ್ಷ ರೂಗಳಿಗೆ ೮೧-೮೨ ರ ಸಾಲಿನಲ್ಲಿ ಮಂಜೂರಾತಿ ನೀಡಲಾಗಿತ್ತು. ಈ ಕಾರ್ಯವನ್ನು ಟೆಂಡರ್ ಮೂಲಕ ಗುತ್ತಿಗೆದಾರರನ್ನು ನೇಮಿಸಿ ೧೯೮೩ನೇ ಸಾಲಿನಲ್ಲಿ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಯಿತು. ಈ ಕಾರ್ಯವನ್ನು ೮೫-೮೬ನೇ ಸಾಲಿನಲ್ಲಿ ಪೂರ್ಣಗೊಳಿಸಿ ದಿನಾಂಕ ೧೮-೧೨-೮೫ ರಂದು ಮಾನ್ಯ ಸಾರಿಗೆ ಸಚಿವರಿಂದ ಉದ್ಘಾಟಿಸಲ್ಪಟ್ಟಿತು. ಪುತ್ತೂರಿನಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲವಾದುದರಿಂದ ಕೇವಲ ಮೂತ್ರಿಗಳನ್ನು ಮಾತ್ರ ಬಸ್‌ನಿಲ್ದಾಣದಲ್ಲಿ ನಿರ್ಮಿಸಲಾಗಿದೆ. ಬಸ್‌ನಿಲ್ದಾಣವು ನಗರದ ಕೇಂದ್ರ ಸ್ಥಳದಲ್ಲಿರುವುದರಿಂದಹಾಗೂ ಭೂಮಿಯನ್ನು ಲ್ಯಾಟರೇಟ್‌ನಿಂದ ಕೂಡಿರುವುದರಿಂದ ಸೆಪ್ಟಿಕ್ ಟ್ಯಾಂಕ್ ಮಾಡಿದರೆ ಫಲಕಾರಿಯಾಗುವುದಿಲ್ಲ. ಸ್ಥಳೀಯ ಪುರಸಭಾ ಅಧಿಕಾರಿಗಳನ್ನು ಸಂಪರ್ಕಿಸಿದರೂ, ಬಸ್‌ನಿಲ್ದಾಣದ ಕೊಳಚೆ ನೀರನ್ನು ಹೊರ ಹಾಕಲು ಪೋರಿ ವ್ಯವಸ್ಥೆಯನ್ನು ಮಾಡಿರುವುದಿಲ್ಲ.

ಬಸ್‌ನಿಲ್ದಾಣದ ಆವರಣಕ್ಕೆ ಡಾಂಬರು ಇಲ್ಲವೆ ಕಾಂಕ್ರೀಟ್ ಹಾಕಲು ಒಂದೆರಡು ಮಳೆಗಾಲ ಕನಿಷ್ಟ ಬೇಕಾಗುತ್ತದೆ. ಇದು ಸಾಮಾನ್ಯವಾಗಿ ಅನುಸರಿಸುವ ಪದ್ಧತಿ. ಆದ್ದರಿಂದ ಈಗ ಎರಡು ಋತುಗಳು ಕಳೆದಿರುವುದರಿಂದ, ಮಳೆಗಾಲ ಪ್ರಾರಂಭವಾಗುವುದರೊಳಗೆ ಈ ಕಾರ್ಯವನ್ನು ಕೈಗೊಂಡು ಪೂರ್ಣಗೊಳಿಸಲಾಗುವುದು.

ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಎಲ್ಲಾ ಬಸ್‌ನಿಲ್ದಾಣಗಳ ಆವರಣಗಳಿಗೆ ಡಾಂಬರು ಕಾಂಕ್ರೀಟ್ ಹಾಕಲು ೮೫-೮೬ನೇ ಸಾಲಿನ ಆಯವ್ಯಯದಲ್ಲಿ ಯೋಚಿಸಲಾಗಿದೆ.

(೧೮) ಸಾಗರದಲ್ಲಿ ಹಾಲು ಶೇಖರಿಸಲು ಮತ್ತು ಮಾರಾಟ ಮಾಡಲು ವ್ಯವಸ್ಥೆ ಮಾಡುವ ಬಗ್ಗೆ

ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ "ಐ.ಆರ್.ಡಿ.ಪಿ. ಯಿಂದ ಎಮ್ಮೆಗಳನ್ನು ಸಾಲದ ಮೇಲೆ ಹಳ್ಳಿಹಳ್ಳಿಗೂ ಒದಗಿಸಿದ್ದು ಕಡುಬಡವರು ಈಗ ಹಾಲನ್ನು ಹಳ್ಳಿಹಳ್ಳಿಗಳಲ್ಲಿ ಯಥೇಚ್ಛವಾಗಿ ಉತ್ಪಾದಿಸುತ್ತಿದ್ದಾರೆ. ಆದರೆ ಹಳ್ಳಿಗಳಲ್ಲಿ ಉತ್ಪಾದಿಸಲ್ಪಟ್ಟ ಬೇಡಿಕೆ ಇಲ್ಲದೇ ಸಾಲ ಪಡೆದ ಫಲಾನುಭವಿಗಳು ವಿಪರೀತ ಕಷ್ಟಕ್ಕೊಳಗಾಗಿದ್ದಾರೆ. ಹಳ್ಳಿಗಳಲ್ಲಿ ಉತ್ಪಾದಿಸಲ್ಪಟ್ಟ ಹಾಲನ್ನು ತೀವ್ರ ಬೇಡಿಕೆ ಇರುವ ಸ್ಥಳಗಳಿಗೆ ಕಳುಹಿಸುವ ವಿಷಯದಲ್ಲಿ ಮಾದೇ ಹೋದಲ್ಲಿ ಎಮ್ಮೆ ಸಾಲ ಪಡೆದವರು ಸಾಲ ತೀರಿಸಲು ಸಾಧ್ಯವಾಗದೇ ಹೋಗಲಿದ್ದು ಆಮೇಲ್ಲಿಂದ ತೀರಾ ದುರವಸ್ಥೆಗೆ ತಲ್ಲಣಲ್ಲಿದುಹೋಗುವ ಸಂಭವವಿರುವುದರಿಂದ ಮಾನ್ಯ ಸಾರಿಗೆ ಸಚಿವರು ಈ ಬಗ್ಗೆ ಹಾಲನ್ನು ಶೇಖರಿಸಲು ಹಾಗೂ ಬೇಡಿಕೆ ಇರುವ ಸ್ಥಳಗಳಿಗೆ ಬಸ್ಸುಗಳಲ್ಲಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ."

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ ಪಶುಸಂಗೋಪನೆ ಮತ್ತು ಮಿನುಗಾರಿಕೆ ಸಚಿವರು).— ಕ್ಷೀರಧಾರೆ ೨ನೇ ಹಂತದ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಡಿಸೆಂಬರ್ ೧೯೮೬ರ ಅಂತ್ಯದ ವೇಳೆಗೆ ೩೩೭೨ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಕಾರ್ಯಾಚರಣೆಯಲ್ಲಿದ್ದು, ೫.೫೫ ಲಕ್ಷ ಹಾಲು ಉತ್ಪಾದಕರು ಸಹಕಾರಿ ಸಂಘಗಳ ಸದಸ್ಯರಾಗಿರುತ್ತಾರೆ. ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಲಿ ಸ್ಥಾಪನೆಯಲ್ಲಿರುವ ೧೨ ಡೈರಿಗಳು, ೨ ಉತ್ಪನ್ನ ಘಟಕಗಳನ್ನು ಅನುಕ್ರಮವಾಗಿ ದಿನಂಪ್ರತಿ ೫.೯ ಲಕ್ಷ ಲೀಟರ್ ಹಾಗೂ ೨.೫ ಲಕ್ಷ ಲೀಟರ್ ಹಾಲನ್ನು ಸಂಸ್ಕರಿಸುವ ಹಾಗೂ ಒಣಗಿಸುವ ಸಾಮರ್ಥ್ಯ ಹೊಂದಿವೆ, ಮತ್ತು ೩.೫೯ ಲಕ್ಷ ಲೀಟರ್ ಹಾಲನ್ನು ಶೀಥಲೀಕರಣಗೊಳಿಸುವ ಸಾಮರ್ಥ್ಯವನ್ನು ಹೊಂದಿದ ಶೀಥಲೀಕರಣ ಘಟಕಗಳು:ಕೇಂದ್ರಗಳು ಇವೆ. ಪ್ರಸ್ತುತ ಸಾಲಿನಲ್ಲಿ ಹಾಲಿನ ಕೇಖರಣೆಯಲ್ಲಿ ಗಣನೀಯವಾದ ಆನಿರೀಕ್ಷಿತ ಹೆಚ್ಚಳವಾಗಿದ್ದು ಕಳೆದ ವರ್ಷದ ಗರಿಷ್ಟ ಪ್ರಮಾಣದ ಶೇಖರಣೆಯಾದ ೬.೬೫ ಲಕ್ಷ ಕೆ.ಜಿ.ಯಿಂದ ಈ ವರ್ಷ ಅದು ೯.೫೫ ಲಕ್ಷ ಕೆ.ಜಿ.ಗೆ ಏರಿದೆ. ಭಾರಿಶೀಯ ಹೈನುಗಾರಿಕಾ ನಿಗಮದೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಮೇರೆಗೆ ಸಂಸ್ಕರಿಸುವ:ಶೀಥಲೀಕರಣ ಗೊಳಿಸುವ ಸಾಮರ್ಥ್ಯವನ್ನು ಹೆಚ್ಚಿಸಲು ಈಗಾಗಲೇ ಕಾರ್ಯ ಪ್ರಾರಂಭವಾಗಿದ್ದು ೧೯೮೭ರ ವೇಳೆಗೆ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಲಿಯು ದಿನಂಪ್ರತಿ ಸುಮಾರು ೧೫ ಲಕ್ಷ ಲೀಟರ್ ಹಾಲಿನ ಪಹಿಮಾಟು ಮಾಡಬಹುದಾಗಿ ಅಶಿಸಲಾಗಿದೆ. ೧೯೮೫ರಲ್ಲಿ ೪.೨೯ ಲಕ್ಷ ಲೀಟರ್ ಹಾಲನ್ನು ದಿನಂಪ್ರತಿ ಮಾರಾಟ ಮಾಡಲಾಗುತ್ತಿದ್ದು ಈ ವರ್ಷ ಅದನ್ನು ೫.೫೪ ಲಕ್ಷ ಲೀಟರ್‌ಗೆ ಏರಿಸಲಾಗಿದೆ. ಹಾಲಿನ ಶೇಖರಣೆ ಹಾಗೂ ವಿಲೇವಾರಿಯಲ್ಲಿ ಸಮತೋಲನವನ್ನು ಸಾಧಿಸಲು ಆಗದ್ದರಿಂದ ಅನಿವಾರ್ಯವಾಗಿ ಹಾಲನ್ನು ಹೊರರಾಜ್ಯಗಳಿಗೂ ಒಣಗಿಸುವುದಕ್ಕೊಸ್ಕರ ಕಳುಹಿಸಬೇಕಾಯಿತು. ಹಾಗೂ ಬಿಜಾಪುರ ಜಿಲ್ಲೆಯ ಬಾಸಗಿ ಪಲಯದ ಡೈರಿಗೆ ಕೂಡ ಹಾಲನ್ನು ಕಳುಹಿಸಿಕೊಟ್ಟು ಒಣಗಿಸಲಾಯಿತು. ಸಂಸ್ಕರಣೆ ಹಾಗೂ ಶೀಥಲೀಕರಣದ ಅಭಾವದಿಂದಾಗಿ ಹೊಸ ಸಹಕಾರಿ ಸಂಘಗಳನ್ನು ಸ್ಥಾಪಿಸುವ ಕ್ರಮವನ್ನು ಮಂದಗತಿಯಲ್ಲಿ ಮುಂದೆ ಸಾಗಬೇಕಾಗಿರುವ ಪ್ರಸಂಗ ಒದಗಿಬಂದಿದೆ. ೧೯೮೭ರ ವೇಳೆಗೆ ಲಭ್ಯವಾಗುವ ಎಲ್ಲಾ ಸಂಸ್ಕರಣ:ಶೀಥಲೀಕರಣದ ಸಾಮರ್ಥ್ಯವನ್ನು ಉಪಯೋಗಿಸಿಕೊಂಡಲ್ಲಿ ಐ.ಆರ್.ಡಿ.ಪಿ. ಫಲಾನುಭವಿಗಳಿಗೆ ಅನುಕೂಲವಾಗುವಂತೆ ಆಯಾ ಪ್ರದೇಶಗಳಲ್ಲಿ ಪರಿಶೀಲಿಸಿ ಸೂಕ್ತ ಮೆನಿಸಿದಲ್ಲಿ ಸಹಕಾರಿ ಸಂಘಗಳನ್ನು ತೆರೆಯಬಹುದಾಗಿದೆ. ಸಧ್ಯದ ಪರಿಸ್ಥಿತಿಯಲ್ಲಿ ಮಾನ್ಯ ಸದಸ್ಯರು ನಿಶ್ಚಿತ ಸ್ಥಳಗಳನ್ನು ಸೂಚಿಸಿದ್ದಲ್ಲಿ ಅವುಗಳ ಬಗ್ಗೆ ವಿಚಾರಿಸಲಾಗುವುದು.

(೧೯) ಉಡುಪಿ ತಾಲ್ಲೂಕಿನ ಹಲವಾರು ಕಡೆಗಳಲ್ಲಿ ಉಪ್ಪುನೀರು ತಡೆಯಲು ಅಣೆಕಟ್ಟುಗಳನ್ನು ದುರಸ್ತಿ ಮಾಡುವ ಬಗ್ಗೆ

ಶ್ರೀ ವಸಂತ್ ಪಿ. ಸಾಲಿಯಾನ್ (ಕಾಪು).—ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕಿನ ಹಲವಾರು ಉಪ್ಪುನೀರು ತಡೆ ಅಣೆಕಟ್ಟುಗಳು ದುರಸ್ತಿ ಮಾಡದೆ ನಾಡುರಸ್ತಿಯಲ್ಲಿವೆ. ಇದರಿಂದಾಗಿ ಸಾವಿರಾರು ರೈತರಿಗೆ ಕೃಷಿ ಮಾಡುವುದಕ್ಕೆ ತೊಂದರೆಯಾಗಿದೆ. ಕೆಲವು ಕೃಷಿ ಪ್ರದೇಶಗಳಲ್ಲಿ ಒಂದು ಬೆಳೆ ಬೆಳೆಸಲೂ ಸಹ ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬೃಹತ್ಪಾದರ ಸಕ್ಕರೆ ಕಾರ್ಖಾನೆಗೆ ಬೇಕಾಗುವಂತಹ ಕಬ್ಬನ್ನು ಬೆಳೆಸುವುದಕ್ಕೆ ನೀರಾವರಿ ಯೋಜನೆ ಸರಿಯಾಗಿ ಆಗದೆ ಸಹ ತೊಂದರೆ ಸಹ ಆಗಿದೆ. ಸರಕಾರವು ಈ ಗಂಭೀರವಾದ ವಿಚಾರವನ್ನು ಪರಿಶೀಲಿಸಿ ಈ ಕಾಮಗಾರಿಗಳನ್ನು ಕೂಡಲೇ ದುರಸ್ತಿ ಮಾಡಲು ಪಣ ಮಂಜೂರು ಮಾಡಿ ರೈತರಿಗೆ ಬಿಳಿ ಬೆಳೆಯಿಸಲು ಸಹಕರಿಸಬೇಕಾಗಿ ಈ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರು ಸರಕಾರದ ಗಮನಕ್ಕೆ ತಂದಿರುವ ಸೂಚನೆಯನ್ನು, ಸಂಬಂಧಪಟ್ಟ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳ ಗಮನಕ್ಕೆ ತರುತ್ತೇನೆ.

(೨೦) ಜಿಲ್ಲಾ ಪರಿಷತ್ ಚುನಾವಣೆ ಸಂದರ್ಭದಲ್ಲಿ ಇಂಡಿ ತಾಲ್ಲೂಕಿನಲ್ಲಿ ಶ್ರೀ ಬಾಬುಲಾಲ್ ಎಂಬುವರು ಅಪಘಾತದಲ್ಲಿ ಮೃತರಾದರೂ ಈ ಪ್ರಕರಣ ಪೋಲೀಸ್‌ಠಾಣೆಯಲ್ಲಿ ದಾಖಲಾಗದಿರುವುದು

ಶ್ರೀ ಎಂ.ಎಲ್. ಉಸ್ತಾದ್,—ಮಾನ್ಯ ಅಧ್ಯಕ್ಷರೇ ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕಿನ ಬಿರಡೋಲ ಗ್ರಾಮದಲ್ಲಿ ಈದ ಜಿಲ್ಲಾ ಪರಿಷತ್ತು ಚುನಾವಣೆ ಸಮಯದಲ್ಲಿ, ಜನತಾ ಪಕ್ಷದ ಪ್ರಚಾರ ವಾಹನವೊಂದರ ಅಪಘಾತಕ್ಕೀಡಾಗಿ ಮೃತಪಟ್ಟ ಶ್ರೀ ಬಾಬುಲಾಲ್ 'ಎಂಬುವರ ಪ್ರಕರಣವನ್ನು